ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ - ಎಲ್ಲರೂ ಬೆಳೆಯೋಣ

ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು - 560 001

ಸಂಖ್ಯೆ: ಸ.ಶಿ.ಅ/ಇ-ಆಡಳಿತ/ಡೈಸ್/ಡಿಸಿಎಫ್.ಮು/2/2011-12 ದಿನಾಂಕ: 27-07-2011

## ಕೊಟೇಶನ್ ಅಹ್ವಾನ

ಸರ್ವ ಶಿಕ್ಷಣ ಅಭಿಯನದ ಶಾಲಾ ಶೈಕ್ಷಣಿಕ ಮಾಹಿತಿ 2011-12 ಶೈಕ್ಷಣಿಕ ಮಾಹಿತಿಯ ನಮೂನೆಗಳನ್ನು ಮುದ್ರಿಸಿ ಈ ಕಛೇರಿಯಿಂದ ನೀಡುವ ವಿವರದಂತೆ ಜಿಲ್ಲಾ ಹಂತಕ್ಕೆ ವಿತರಿಸುವ ಸಲುವಾಗಿ ಪ್ರತಿ ನಮೂನೆಗೆ ತಗಲುವ ವೆಚ್ಚದ ಬಗ್ಗೆ ದರಪಟ್ಟಿಯನ್ನು ಕರೆಯಲಾಗಿದೆ. ದರಪಟ್ಟಿಯನ್ನು ಮುಚ್ಚಿದ ಲಕೋಟೆಯಲ್ಲಿ ದಿನಾಂಕ: 03-08-2011 ರೊಳಗೆ ರಾಜ್ಯ ಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01 ಇವರಿಗೆ ತಲುಪುವಂತೆ ಸಲ್ಲಿಸುವುದು ಹಾಗೂ ಲಕೋಟೆಯ ಮೇಲೆ **"ಶಾಲಾ ಶೈಕ್ಷಣಿಕ ಮಾಹಿತಿ 2011-12 ಮುದ್ರಣಕ್ಕಾಗಿ ದರಪಟ್ಟಿ"** ಎಂದು ನಮೂದಿಸುವುದು. ಇದರ ತಾಂತ್ರಿಕ ವಿಶಿಷ್ಟತೆಯ ವಿವರ ಈ ಕೆಳಗಿನಂತಿದೆ.

| | | |
|---|---|---|
| 1 | ಮುದ್ರಿಸಬೇಕಾದ ಅಂದಾಜು ಪ್ರತಿಗಳು | ಕನ್ನಡ ಭಾಷೆ- 77.000 ಪ್ರತಿಗಳು<br>ಸರ್ಕಾರಿ:- 54388<br>ಅನುದಾನಿತ:- 6325<br>ಅನುದಾನ ರಹಿತ:- 16287 |
| 2 | ಕಾಗದದ ಅಳತೆ ಮತ್ತು ವರ್ಣ | 70 ಜಿ.ಎಸ್.ಎಂ ಮ್ಯಾಪ್ ಲೀಥೋ 04 ಪೇಪರ್, (70 GSM Print- White-Govt, Pink-Aided, Blue-Unaided) |
| 3 | ಒಟ್ಟು ಪುಟಗಳ ಸಂಖ್ಯೆ | 20 |
| 4 | ಬೈಡಿಂಗ್ | ಸೆಂಟರ್ ಪಿನ್ನಿಂಗ್ (Center Pinning) |
| 5 | ಮುದ್ರಣ ಕಾಗದ ಮತ್ತು ಗುಣ ಮಟ್ಟ | ಮುದ್ರಣಕ್ಕೆ ಬಳಸಬೇಕಾದ ಕಾಗದ 70 ಜಿ.ಎಸ್.ಎಂ ಮುದ್ರಣ ಕಾಗದ (70 GSM Print)<br>1. Whiteness :>98%<br>2. Thickness : 103-110 um.<br>3. Opacity : >94%<br>4. Brightness : 101-104% |
| 6 | ಮುದ್ರಣ ಪೂರ್ವ ಕೆಲಸ | ಮುದ್ರಣ ಮಾಡಬೇಕಾದ ನಮೂನೆಗಳನ್ನು ಸಿ.ಡಿ ರೂಪದಲ್ಲಿ ನೀಡಲಾಗುವುದು. |
| 7 | ಕಾಲಾವಧಿ | ಕಾರ್ಯಾದೇಶ ಪಡೆದ 2 ದಿನದೊಳಗೆ ಕರಡು ಪ್ರತಿ ನೀಡಿ ಅನುಮೋದನೆ ಪಡೆಯಬೇಕು. ಪ್ರಿಂಟಿಂಗ್ ಕರಡು ಪ್ರತಿ (Proof) ಅನುಮೋದನೆಗೊಂಡ 7 ದಿನದೊಳಗೆ ನಮೂನೆಗಳನ್ನು ಮುದ್ರಿಸಿ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರತ್ಯೇಕ ಬಂಡಲ್‌ಗಳನ್ನು ಜಿಲ್ಲಾ ಡಿಡಿಪಿಐ ಕಛೇರಿಗೆ ತಲುಪಿಸಿ ಸ್ವೀಕೃತಿಯನ್ನು ಕಛೇರಿಗೆ ನೀಡಬೇಕು. |

D:\DISE 2011-12\Quotation\DCF DISE Quotation Letter.docx

ಸೂಚನೆ ಮತ್ತು ನಿಬಂಧನೆಗಳು:

1. ಮುದ್ರಣಕ್ಕೆ ಸಾಹಿತ್ಯವನ್ನು ಆಯ್ಕೆಯಾದ ಸಂಸ್ಥೆಗೆ ಸಿ.ಡಿ ರೂಪದಲ್ಲಿ ನೀಡಲಾಗುವುದು. ಪ್ರತಿ ಪುಟದ ವಿನ್ಯಾಸ ತಯಾರಿಸಿ ರಾಜ್ಯ ಯೋಜನಾ ನಿರ್ದೇಶಕರ ಅನುಮೋದನೆ ಪಡೆಯುವುದು.
2. ಸರ್ಕಾರಿ ಶಾಲೆಗಳಿಗೆ , ಅನುದಾನಿತ ಶಾಲೆಗಳಿಗೆ, ಅನುದಾನ ರಹಿತ ಶಾಲೆಗಳಿಗೆ ಪ್ರತ್ಯೇಕವಾದ ಬಣ್ಣದ ಪೇಪರ್‌ನಲ್ಲಿ ನಮೂನೆಗಳನ್ನು ಮುದ್ರಿಸುವುದು.
3. ಮುದ್ರಣಕ್ಕೆ ಹೋಗುವ ಮುನ್ನ ಮೊದಲ ಪ್ರತಿಯ ಅನುಮೋದನೆಯನ್ನು ಸರ್ವಶಿಕ್ಷಣ ಅಭಿಯಾನ ಕಛೇರಿಯಿಂದ ಪಡೆದ ನಂತರವೇ ಮುದ್ರಣ ಕಾರ್ಯವನ್ನು ಪ್ರಾರಂಭಿಸುವುದು.
4. ನಮೂದಿಸಿದ ದರವು ಮುದ್ರಣ, ಜಿಲ್ಲಾ ಹಂತಕ್ಕೆ ವಿತರಣೆ ಹಾಗೂ ಎಲ್ಲಾ ವಿವಿಧ ತೆರಿಗೆಗಳನ್ನು ಒಳಗೊಂಡಿರತಕ್ಕದ್ದು, ಮುದ್ರಣ ಕಾರ್ಯಕ್ಕೆ ಯಾವುದೇ ಮುಂಗಡ ಪಾವತಿಸಲಾಗುವುದಿಲ್ಲ.
5. ಮುದ್ರಣ ಕಾರ್ಯಕ್ಕೆ ಬಳಸುವ ಕಾಗದದ ಸ್ಯಾಂಪಲ್‌ಗಳನ್ನು ದೃಢೀಕರಿಸಿ, ಕೊಟೇಶನ್‌ನೊಂದಿಗೆ, ಕಡ್ಡಾಯವಾಗಿ ಸಲ್ಲಿಸುವುದು.
6. ರೂ. 10,000/-( ಹತ್ತು ಸಾವಿರ ರೂ.ಗಳು)ಗಳ EMD ಯನ್ನು ರಾಜ್ಯಯೋಜನಾ ನಿರ್ದೇಶಕರು, ಸರ್ವಶಿಕ್ಷಣ ಅಭಿಯಾನ, ಬೆಂಗಳೂರು-01 ಇವರ ಹೆಸರಿನಲ್ಲಿ Demand Draft ರೂಪದಲ್ಲಿ ನೀಡಬೇಕು ಮತ್ತು ಬೆಂಗಳೂರು ನಗರ ವ್ಯಾಪ್ತಿಯಲ್ಲಿ ನಗದುಗೊಳಿಸುವಂತಿರಬೇಕು.
7. ಕಾರ್ಯಾದೇಶದಲ್ಲಿ ನಿಖರವಾದ ಪ್ರತಿಗಳ ಸಂಖ್ಯೆ ಮತ್ತು ನಿಖರವಾದ ಪುಟಗಳ ಆಧಾರದ(Pro-rata) ಮೇಲೆ ಬಿಲ್ಲನ್ನು ಪಾವತಿಸಲಾಗುವುದು.
8. ಕಳಪೆ ಮಟ್ಟದ ಮುದ್ರಣ ಕಾರ್ಯಕ್ಕೆ, ಮುದ್ರಣದೋಷ ಕಂಡುಬಂದಲ್ಲಿ ಅಥವಾ ನಿಗಧಿತ ಸ್ಪೆಸಿಫಿಕೇಷನ್ ಗಿಂತ ಕಡಿಮೆ ಗುಣಮಟ್ಟದ ಪೇಪರ್ ಮುದ್ರಣ ಕಾರ್ಯಕ್ಕೆ ಬಳಕೆ ಮಾಡಿರುವುದು ಕಂಡು ಬಂದಲ್ಲಿ ಇಂತಹ ಪುಸ್ತಕಗಳನ್ನು ತಿರಸ್ಕರಿಸಲಾಗುವುದು ಹಾಗೂ ಈ ಬಗ್ಗೆ ಯಾವುದೆ ಅನುದಾನ ಬಿಡುಗಡೆ ಮಾಡುವುದಿಲ್ಲ. ಇದರಿಂದ ಆಗಬಹುದಾದ ನಷ್ಟಗಳಿಗೆ ತಮ್ಮ ಸಂಸ್ಥೆಯೇ ಜವಬ್ದಾರಿಯಾಗಿರುತ್ತದೆ.
9. ಕಾರ್ಯದೇಶ ನೀಡಿದ 7 ದಿನಗಳ ಒಳಗಾಗಿ ಮುದ್ರಣ ಮತ್ತು ವಿತರಣೆಯನ್ನು ಪೂರ್ಣಗೊಳಿಸತಕ್ಕದ್ದು, ಪ್ರತಿ ದಿನದ ವಿಳಂಕ್ಕೆ 0.10% ರಂತೆ ದಂಡ ವಿಧಿಸಲಾಗುವುದು. ದಂಡದ ದರ 10% ಮೀರಿದರೆ ಮುದ್ರಣ ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಗುವುದು, EMD ಮುಟ್ಟುಗೋಲು ಹಾಕಿಗೊಳ್ಳಲಾಗುವುದು.
10. ತಡವಾಗಿ ಸಲ್ಲಿಸಿದ ದರ ಪಟ್ಟಿಗಳನ್ನು ಯಾವುದೇ ಕಾರಣಕ್ಕೂ ಅಂಗೀಕರಿಸುವುದಿಲ್ಲ ಮತ್ತು ಕೊಟೇಶನ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕಛೇರಿಯು ಹೊಂದಿರುತ್ತದೆ.
11. ಮುದ್ರಣ ಕಾರ್ಯದ ನಂತರ ಬಿಲ್ ಜೊತೆಯಲ್ಲಿ ಸಿ.ಡಿ ರೂಪದಲ್ಲಿ ಅಂತಿಮ ಮುದ್ರಣ ಸಾಹಿತ್ಯದ ವಿವರಗಳನ್ನು ರಾಜ್ಯ ಕಛೇರಿಗೆ ಸಲ್ಲಿಸುವುದು, ರಾಜ್ಯ ಕಛೇರಿಗೆ ನೀಡುವ ವಿತರಣೆ ವಿತರಿಸಿದ ನಂತರ ಪಡೆದ ಸ್ವೀಕೃತ ಸಮೇತ ಬಿಲ್ ಸಲ್ಲಿಸಿವುದು.
12. ಹೆಚ್ಚಿನ ಮಾಹಿತಿಗಾಗಿ ***www.schooleducation.kar.nic.in/SSA*** ವೆಬ್‌ಸೈಟ್‌ನ್ನು ವೀಕ್ಷಿಸುವುದು.

(ರಾಜ್ಯ ಯೋಜನಾ ನಿರ್ದೇಶಕರ ಆದೇಶಾನುಸಾರ)

ನಿರ್ದೇಶಕರು (ಕಾರ್ಯಕ್ರಮಗಳು)
ಸರ್ವಶಿಕ್ಷಣ ಅಭಿಯಾನ
ಬೆಂಗಳೂರು

D:\DISE 2011-12\Quotation\DCF DISE Quotation Letter.docx